# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 Volume:01 • ಸಂಚಿಕೆ:191 Issue:191 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 23.12.2023 23.12.2023 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2




## ವಚನ ಅರಿವು

### ವಿಶೇಷ ಶ್ರೀಮಂತಿಕೆ

**ಎನಗೆ ಮನೆ ಇಲ್ಲ. ಎನಗೆ ಧನವಿಲ್ಲ.**
**ಮಾಡುವುದೇನು? ನೀಡುವುದೇನು?**
**ಮನೆ ಧನ ಸಕಲಸಂಪದ ಸೌಖ್ಯವುಳ್ಳ ನಿಮ್ಮ ಶರಣರ**
**ತಪ್ಪಲಕ್ಕಿಯನಾಯ್ದು ತಂದು, ಎನ್ನೊಡಲ ಹೊರೆವೆನಾಗಿ,**
**ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬಸವಣ್ಣಾ.**

**– ಆಯ್ದಕ್ಕಿ ಮಾರಯ್ಯಾ**

ಆ ಕಾಲದಲ್ಲಿ ದಾನ ಮಾಡುವುದು ಶ್ರೇಷ್ಠ ಮತ್ತು ಮುಕ್ತಿ ಪಡೆಯುವ ಮಾರ್ಗವೆಂದು ಭಾವಿಸಲಾಗಿತ್ತು. ಈ ಕಾಲದಲ್ಲಿಯೂ ಹಾಗೇ ತಿಳಿಯಲಾಗಿದೆ; ವೈದಿಕ ಶಾಸ್ತ್ರಗಳ ಪ್ರಕಾರ. ಅಸಂಗ್ರಹ ತತ್ವವನ್ನು ಪಾಲಿಸುತ್ತಿದ್ದ ಮಾರಯ್ಯ ಸ್ಪಷ್ಟವಾಗಿ ಘೋಷಿಸುತ್ತಾನೆ ತಾನು ದಾನ ನೀಡುವುದೇನು ಇಲ್ಲವೆಂದು. ಶರಣರು ಸಂಗ್ರಹದ ವಿರುದ್ಧ ಮಾತನಾಡಿದ್ದಾರೆ. ಇದಕ್ಕೆಬಸವಣ್ಣ'ಸೀರೆಯೊಳಗೊಂದೆಳೆಯ,ಹೊನ್ನಿನೊಳಗೊಂದೊರೆಯ, ಅನ್ನದೊಳಗೊಂದಗುಳ ಇಂದಿಂಗೆ, ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎನ್ನುತ್ತಾನೆ. ಶರಣರು ಬಡತನದಲ್ಲಿ ಬದುಕನ್ನು ಇಷ್ಟಪಟ್ಟರು, 'ಭಕ್ತರಿಗೆ ಬಡತನವುಂಟೆ?' ಎಂದು ಬಡತನವನ್ನು ನಿರಾಕರಿಸಿದರು. ಹಾಗಾಗಿ ಶರಣರದ್ದು ವಿಶೇಷ ಶ್ರೀಮಂತಿಕೆಯಾಗಿದೆ. ಇಡೀ ಸಮಾಜದ ಆರ್ಥಿಕ ಸುಧಾರಣೆಗೆ ಎಲ್ಲರೂ ದುಡಿಯಬೇಕು, ದುಡಿದದ್ದರಲ್ಲಿ ತಮಗೆ ಮಿಕ್ಕಿದ್ದನ್ನು ಸಮಾಜಕ್ಕೆ ಹಂಚಬೇಕು ಜೊತೆಗೆ ದುಡಿಮೆಯಲ್ಲಿರುವುದರಿಂದ ರಾಜನಿಗೂ ತೆರಿಗೆ ಕಟ್ಟಬೇಕು. ಹಾಗಾಗಿ ಪ್ರಭುತ್ವದ ಬೊಕ್ಕಸವು ತುಂಬುತ್ತಿತ್ತು. ರಾಜ್ಯ ಅಭಿವೃದ್ಧಿಯತ್ತ ಸಾಗುತ್ತಿತ್ತು. ಮಾರಯ್ಯನ ಚಿಂತನೆ ಆರ್ಥಿಕ ಸಿದ್ಧಾಂತದ ಪ್ರಮೇಯದಂತೆ ಕಾಣುತ್ತದೆ. ಈ ವಚನ ಉಳ್ಳವರು ಮತ್ತು ಇಲ್ಲದವರ ಚಿತ್ರಣವನ್ನು ನೀಡುತ್ತದೆ. ಉಳ್ಳವರು ದಾನ ಮಾಡಿದರೆ ಇಲ್ಲದವರು ಕಾಯಕ ಮಾಡುತ್ತಾರೆ. ಕಾಯಕ ಮಾಡುವುದರಿಂದ ಅಲ್ಲಿ ಧನ ಸಂಗ್ರಹವಾಗುವುದಿಲ್ಲ, ದಾಸೋಹವಾಗುತ್ತದೆ. ದಾಸೋಹ ವಿನಿಮಯವಾಗುತ್ತದೆ.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ನ್ಯಾನೋ ಕಥೆ

ಒಮ್ಮೆ ಶ್ರೀ ಕೃಷ್ಣ ಮತ್ತು ಸುಧಾಮ ಗುರುಗಳ ಆಶ್ರಮದಲ್ಲಿ ವಿದ್ಯಾಭ್ಯಾಸ ಮಾಡುವಾಗ ಇಬ್ಬರು ವಿರಾಮದ ಸಮಯದಲ್ಲಿ ಹಣ್ಣನ್ನು ತಿನ್ನಲೆಂದು ವನಕೆ ಹೋದರು. ಹಣ್ಣನ್ನು ಹುಡುಕಲೆಂದು ಕೃಷ್ಣ ಒಂದು ದಾರಿ ಸುಧಾಮ ಮತ್ತೊಂದು ದಾರಿಯಲ್ಲಿ ಹೋದರು. ಸ್ವಲ್ಪ ಹೊತ್ತು ಕಳೆದ ಮೇಲೆ ಕೃಷ್ಣ ತನ್ನ ಗೆಳೆಯ ಸುಧಾಮ ಏನು ಮಾಡುತ್ತಿದ್ದಾನೆ ಎಂದು ನೋಡಬೇಕೆಂದು ಸುಧಾಮ ಇದ್ದಲ್ಲಿಗೆ ಬಂದ. ಆಗ ಸುಧಾಮನು ಕೃಷ್ಣ ಬಂದಿದ್ದನ್ನು ಗಮನಿಸದೇ ಗಿಡದಲ್ಲಿದ್ದಂತ ಎಲ್ಲಾ ಹಣ್ಣುಗಳನ್ನು ತಿನ್ನುತ್ತಿದ್ದನು ಮತ್ತು ಒಂದಣ್ಣನ್ನು ಬಿಡದೆ ತಿಂದನು. ಇದನ್ನು ಕಂಡ ಕೃಷ್ಣನು ಇದೇನು ಗಿಡದಲ್ಲಿ ಒಂದು ಹಣ್ಣು ಬಿಡದಂತೆ ನೀನೊಬ್ಬನೇ ಈ ರೀತಿ ತಿನ್ನಬಹುದಾ ಎಂದನು. ಅದಕ್ಕೆ ಸುಧಾಮನು ಏನು ಉತ್ತರ ಕೊಡದೆ ಸುಮ್ಮನಿದ್ದನು. ಅದೇ ಗಿಡದ ಎಲೆಯ ಮರೆಯಲ್ಲಿ ಇದ್ದ ಒಂದು ಹಣ್ಣನ್ನು ಕಿತ್ತು ಕೃಷ್ಣ ಬಾಯಲ್ಲಿ ಹಾಕಿಕೊಂಡು ತಕ್ಷಣವೇ ಉಗಿದು ಬಿಟ್ಟನು. ಗೆಳೆಯ ಇಷ್ಟು ವಿಷಕಾರಿಯಾದ ಹಣ್ಣನ್ನು ಹೇಗೆ ತಿಂದೇ ಗೆಳೆಯ ಎಂದ ಕೃಷ್ಣ . ಅದಕ್ಕೆ ಸುಧಾಮನು ಈ ಹಣ್ಣು ನಿನ್ನ ಕಣ್ಣಿಗೆ ಬೀಳಬಾರದು ಎಂದು ಹಾಗೂ ಇಷ್ಟು ವಿಷಕಾರಿ ಹಣ್ಣನ್ನು ನೀನು ತಿನ್ನಬಾರದು ಎಂದು ಎಲ್ಲವನ್ನೂ ನಾನೇ ತಿಂದೆ ಎಂದನು. ಸುಧಾಮನ ನಿಜ ಪ್ರೀತಿಯನ್ನು ಕಂಡು ಕೃಷ್ಣ ಮೂಕನಾಗಿ ಅವನನ್ನು ಅಪ್ಪಿದ. ಇದಲ್ಲವೇ ನಿಜವಾದ ಸ್ನೇಹ ಮತ್ತು ಪ್ರೀತಿ.?

**– ಜಿ ಆರ್ ಬಸವ ರಾಜೇಶ್ವರಿ**
**ಹಗರಿಗಜಾಪುರ**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# ಹೊಸ ವರುಷ... ಹರುಷ... ಕನಸು...



ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ಹೊಸತು ಹೊತ್ತು ಬರುತಿದೆ. . . . .

ಎಂಬ ಕವಿವಾಣಿಯಂತೆ ಪ್ರತಿವರ್ಷ ಆರಂಭವಾಗುತ್ತಿದ್ದಂತೆ ಹೊಸ ಹೊಸ ಕನಸುಗಳು ಗರಿಗೆದರುತ್ತವೆ. ವರ್ಷದ ಕೊನೆ ಕೊನೆಯಲ್ಲಿ ರಾಜಕೀಯ ನೇತಾರರು, ವ್ಯಾಪಾರಿಗಳು, ಮಾಲಿಕರು, ಅಧಿಕಾರಿಗಳು, ಮುಖಂಡರು, ಸಂಘ ಸಂಸ್ಥೆಗಳು ತಮ್ಮ ತಮ್ಮ ಗುರಿಗಳತ್ತ ಸಾಗಲು ಹೊಸತನ, ಹೊಸ ಆಶಯ, ಹೊಸ ಯೋಜನೆ, ನವೀನ ಕೌಶಲ್ಯಗಳೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಲು ಸನ್ನದ್ಧರಾಗುತ್ತಾರೆ. ಈ ರೀತಿ ವ್ಯವಸ್ಥಿತ ಯೋಜನೆಯೊಂದಿಗೆ ಮುಂದೆ ಸಾಗಿ ತಮ್ಮ ಗೋಲನ್ನು ತಲುಪಿದವರು ನಮ್ಮ ನಡುವೆ ಸಾಕಷ್ಟು ಜನರಿದ್ದಾರೆ.

ಹೌದು. ಇದು ಸರಿ. . .ನಾವೆಲ್ಲಾ ಮಕ್ಕಳು, ನಮ್ಮ ಮುಂದೆ ಈ ವಿಷಯವನ್ನು ಯಾಕೆ ಹೇಳ್ತಿದ್ದಾರೆ ? ಅಂತ ಯೋಚಿಸ್ತಿದ್ದೀರಾ!. . .ಹೌದು . . . .ಅದಕ್ಕೂ ಕಾರಣವಿದೆ.

ಅನೇಕ ಮಕ್ಕಳು ಹೊಸ ವರ್ಷವನ್ನು ವಿಶೇಷವಾಗಿ ಪರಿಗಣಿಸುವುದೇ ಇಲ್ಲ. ಎಂದಿನಂತೆ ಅದನ್ನೂ ಸಾಮಾನ್ಯವಾಗಿ ತೆಗೆದುಕೊಳ್ಳುವವರೇ ಹೆಚ್ಚು. ಅದರ ಬದಲಾಗಿ ನಾನು ಹಿಂದಿನ ವರ್ಷಕ್ಕಿಂತ ಈ ಹೊಸ ವರ್ಷಕ್ಕೆ ಸ್ವಲ್ಪ ದೊಡ್ಡವನಾಗಿದ್ದೇನೆ. ನನ್ನ ಮೇಲೆ ಜವಾಬ್ದಾರಿಗಳು ಹೆಚ್ಚಾಗುತ್ತಿವೆ. ನನ್ನ ಕುರಿತು ಮನೆಯಲ್ಲಿ ಎಲ್ಲರೂ ಅಪಾರ ನಿರೀಕ್ಷೆಗಳನ್ನು ಹೊತ್ತು ಕೊಳ್ಳುತ್ತಿದ್ದಾರೆ. ಆ ನಿಟ್ಟಿನಲ್ಲಿ ಸಫಲನಾಗಲು ನಾನು ಬರುವ ಒಂದು ವರ್ಷವನ್ನು ಉತ್ತಮ ಅವಕಾಶ ಎಂದು ಪರಿಗಣಿಸಿ, ಆ ದಾರಿಯಲ್ಲಿ ಮುನ್ನಡೆದರೆ ನಮ್ಮ ಗುರಿಗಳು ಹತ್ತಿರವಾಗುವುದರಲ್ಲಿ ಸಂಶಯವಿಲ್ಲ.

ವಿದ್ಯಾರ್ಥಿಗಳು ಒಂದಷ್ಟು ಮನಸ್ಸು ಮಾಡಿ ಬರುವ ಹೊಸ ವರ್ಷದಲ್ಲಿ ತಮ್ಮ ಬದುಕಿನ ಕೆಲವು ಮಹತ್ವದ ಮತ್ತು ಒಳ್ಳೆಯ ಅಂಶಗಳನ್ನು ಅಳವಡಿಸಿಕೊಂಡಲ್ಲಿ, ಗೋಲು ಹತ್ತಿರಕ್ಕೆ ತಾನೇ ತಾನಾಗಿ ಬರುತ್ತದೆ. ಮಾಡಿಕೊಂಡ ಬದಲಾವಣೆಗಳು ಆರಂಭದಲ್ಲಿ ಸ್ವಲ್ಪ ಕಷ್ಟ ಎನಿಸಿದರೂ, ಜಗ್ಗದೆ ಮುನ್ನಡೆಯುತ್ತಾ ಅವು ನಿರಂತರವಾದಲ್ಲಿ, ಉತ್ತಮ ಹವ್ಯಾಸಗಳಾಗಿ ನಿಮ್ಮೊಳಗೆ ಬೆರೆತುಹೋಗುತ್ತವೆ. ಆ ನಂತರ ನೀವು ಹಿಂತಿರುಗಿ ನೋಡುವ ಪ್ರಮೇಯವೇ ಬರುವುದಿಲ್ಲ. ಅಂತಹ ಮಹತ್ವದ ಅಂಶಗಳಲ್ಲಿ ಕೆಲವನ್ನು ನೋಡುವುದಾದರೆ. . .

**ಸಮಯಕ್ಕೆ ಮೌಲ್ಯವಿದೆ:–** ಒಂದು ಸೆಕೆಂಡಿಗೂ ಅದರದೇ ಆದ ಬೆಲೆ ಇದೆ. 'Student life is Golden life' ಎಂದು ಹಿರಿಯರು ಹೇಳುತ್ತಾರೆ. ಆ ಸಮಯದ ಪ್ರತಿ ಘಳಿಗೆಯೂ ಬಂಗಾರದಷ್ಟೇ ಮೌಲ್ಯಯುತವಾದದ್ದು. ಸಮಯವನ್ನು ಹಾಳು ಮಾಡುವ ಬದಲು, ಪ್ರತಿ ಕ್ಷಣವನ್ನೂ ಸದುಪಯೋಗ ಮಾಡಿಕೊಳ್ಳಲು ನಿಗಧಿತ ವೇಳಾ ಪಟ್ಟಿ ತಯಾರಿಸಿಕೊಂಡು, ಅದಕ್ಕೆ ಹೊಂದಿಕೊಂಡು ಸಾಗಿದಲ್ಲಿ ಹೆಚ್ಚು ಫಲ ಕಾಣಬಹುದು. ಈ ಸಂಕಲ್ಪವನ್ನು ಈ ವರ್ಷದಿಂದಲೇ ತೊಡೋಣವೇ?.

ಬೇಗ ಮಲಗು ಬೇಗ ಏಳು:– ರಾತ್ರಿ ಬೇಗ ಮಲಗು, ಬೆಳಿಗ್ಗೆ ಬೇಗ ಏಳು ಎಂಬ ಸೂತ್ರ ಎಲ್ಲರಿಗೂ ತಿಳಿದಿದೆ. ಆದರೆ ಆಚರಣೆಗೆ ತರುವುದಿಲ್ಲ ಅಷ್ಟೆ. ಅದಕ್ಕೆ ರಾತ್ರಿ ಬೇಗ ಮಲಗಿ ಬೆಳಗಿನ ಬ್ರಾಹ್ಮಿ ಮಹೂರ್ತದಲ್ಲಿ ಎದ್ದು ಬೆಳಗಿನ ಪ್ರಕ್ರಿಯೆ ಮುಗಿಸುವ ಅಭ್ಯಾಸ ಬೆಳೆಸಿಕೊಂಡರೆ, ಮುಂದೆ ಅದು ನಮ್ಮನ್ನು ಕೈ ಹಿಡಿಯುವುದರಲ್ಲಿ ಅನುಮಾನವಿಲ್ಲ. ಈ ನಿಟ್ಟಿನಲ್ಲಿ ನಮ್ಮ ಪಯಣ ಹೊಸ ವರ್ಷದಿಂದ ಯಾಕೆ ಪ್ರಾರಂಭವಾಗಬಾರದು?.

ವ್ಯಾಯಾಮ/ಯೋಗ/ಪ್ರಾಣಾಯಾಮ/ಧ್ಯಾನ:–'ಆರೋಗ್ಯವೇ ಮಹಾ ಭಾಗ್ಯ' ಮತ್ತು 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?' ಎಂಬ ಮಾತು ಎಲ್ಲರೂ ಕೇಳಿದ್ದೇವೆ. ಅಂದರೆ ಚಿಕ್ಕರಿರುವಾಗಲೇ ದೇಹವನ್ನು ಬಗ್ಗಿಸಬೇಕು. ಅದಕ್ಕೆ ನಮ್ಮ ಪೂರ್ವಜರು ವ್ಯಾಯಾಮ, ಯೋಗ, ಪ್ರಾಣಾಯಾಮ, ಧ್ಯಾನಗಳನ್ನು ಕಂಡು ಹಿಡಿದು ವಿಶ್ವಕ್ಕೆ ಮಾದರಿಯಾಗಿದ್ದಾರೆ. ವಿದೇಶಿಯರು ಇವುಗಳನ್ನು ಹೆಚ್ಚೆಚ್ಚು ಅಳವಡಿಸಿಕೊಳ್ಳುತ್ತಿದ್ದರೆ, ನಾವು ನಿರ್ಲಕ್ಷ ಮಾಡುತ್ತಿದ್ದೇವೆ. ಅವುಗಳಿಂದ ದೇಹಕ್ಕೆ ಮತ್ತು ಮನಸ್ಸಿಗೆ ಸಿಗುವ ಲಾಭವನ್ನು ಲೆಕ್ಕ ಹಾಕಲು ಸಾಧ್ಯವೇ ಇಲ್ಲ. ದೇಹ ಮತ್ತು ಮನಸ್ಸು ಹಿಡಿತಕ್ಕೆ ಬಂದು, ಏಕಾಗ್ರತೆ ಹೆಚ್ಚಾಗುತ್ತದೆ. ಹಾಗಾಗಿ ಗುರುಗಳ ಬಳಿ ಇವುಗಳನ್ನು ಕಲಿತು ಅಳವಡಿಸಿಕೊಳ್ಳಲು ಈಗ ಸಕಾಲ ಅಲ್ಲವೇ?.

**ಊಟಕ್ಕೂ ಆದ್ಯತೆ ಇರಲಿ:–** 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಗಾದೆ ಮಾತಿದೆ. ಮಕ್ಕಳು ಹೆಚ್ಚಾಗಿ ಓದು-ಬರಹ, ಆಟಗಳಲ್ಲಿ ಮಗ್ನರಾಗಿ ಸರಿಯಾಗಿ ಊಟ ಮಾಡುವುದಿಲ್ಲ ಎಂದು ತಾಯಂದಿರು ದೂರುತ್ತಲೇ ಇರುತ್ತಾರೆ. ಅದಕ್ಕೆ ಮಕ್ಕಳಿಗೆ ಇಷ್ಟವಾದವೆಂದು ಕೆಲವೇ ತಿಂಡಿಗಳನ್ನು ನೀಡುತ್ತಾರೆ. ಇದು ಮೆದುಳಿಗೆ ಬೇಕಾದ ಶಕ್ತಿಯನ್ನು ತುಂಬುವುದಿಲ್ಲ. ವಿದ್ಯಾರ್ಥಿಗಳ ಮೆದುಳು ಸರ್ವರೀತಿಯಲ್ಲಿ ಬೆಳೆಯಬೇಕಾದರೆ ಅದಕ್ಕೆ ಅತ್ಯಂತ ಪ್ರಮುಖವಾಗಿ ಪ್ರೋಟಿನ್, ವಿಟಮಿನ್ ಎ, ಬಿ, ಸಿ, ಕಬ್ಬಿಣಾಂಶಯುಕ್ತ ಆಹಾರ ಪದಾರ್ಥಗಳನ್ನು ಸೇವಿಸಬೇಕು. ಮಕ್ಕಳು ಚಿಕ್ಕವರಿರುವಾಗಲೇ ಕರಿದ ಪದಾರ್ಥಗಳು, ಚಾಕಲೇಟ್, ಪಿಜ್ಜಾ-ಬರ್ಗರ್ ತರಹದ ವಸ್ತುಗಳ ಮೋಹಕ್ಕೆ ಒಳಗಾಗಬಾರದು. ಅದರ ಬದಲು ಹಣ್ಣುಗಳ ರುಚಿ ಹತ್ತಿಸಬೇಕು. ಕಾಫಿ, ಟೀ . . . .ಸೇವಿಸುವುದು ಒಳ್ಳೆಯದಲ್ಲ. ಅದಕ್ಕೆ ಬದಲಾಗಿ ಹಣ್ಣಿನ ಜ್ಯೂಸ್‌ಗಳನ್ನು ಕುಡಿದರೆ ಎಲ್ಲಾರೀತಿಯಿಂದಲೂ ಉತ್ತಮ. ಹಸಿ ತರಕಾರಿ ಮತ್ತು ಸೊಪ್ಪುಗಳ ಸೇವನೆ ಹೆಚ್ಚಾದಷ್ಟು ಮೆದುಳಿನ ಶಕ್ತಿ ವರ್ಧಿಸುತ್ತದೆ. ನೀರು ದೇಹಕ್ಕೆ ಅಗತ್ಯ. ಶುದ್ಧವಾದ ನೀರನ್ನು ಸೇವಿಸಿದಷ್ಟು ಆರೋಗ್ಯ ಶುದ್ಧವಾಗಿರುತ್ತದೆ. ನಮ್ಮ ದೇಹದಲ್ಲಿ ನೀರಿನಾಂಶ ಶೇ65 ಇದ್ದರೆ, ಮೆದುಳಿನಲ್ಲಿ ಶೇಕಡ75ರಷ್ಟು ಇರುತ್ತದೆ. ಹಾಗಾಗಿ ಮಕ್ಕಳು ಹೆಚ್ಚೆಚ್ಚು ನೀರು ಕುಡಿದಷ್ಟು, ಆರೋಗ್ಯದ ಜೊತೆಗೆ ಜೀರ್ಣಕ್ರಿಯೆ ಸರಾಗ.



**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com

**ಅಂದಿನ ಪಾಠ ಅಂದೆ:–** ಅನೇಕ ಮಕ್ಕಳು "ಯುದ್ಧಕಾಲೇ ಶಸ್ತ್ರಭ್ಯಾಸ" ಎಂಬಂತೆ ಪರೀಕ್ಷೆ ಹತ್ತಿರ ಬಂದಾಗ ಓದುವ ಗೊಂದಲಕ್ಕೆ ಬೀಳುತ್ತಾರೆ. ಅದರಿಂದ ಅವರು ಪಡುವ ಕಷ್ಟ ಹೇಳ ತೀರದು. ಆದರೆ ಜಾಣ ಮಕ್ಕಳು ಆ ದಿನದ ಪಾಠವನ್ನು ಅಂದೇ ಮುಗಿಸಿ, ಮುಂದಿನ ಪಾಠವನ್ನು ಅವಲೋಕಿಸುವುದರಿಂದ ಮೊದಲನೆ ಸ್ಥಾನ ಪಡೆಯುತ್ತಾರೆ. ಈ ವಿಧಾನವನ್ನು ಎಲ್ಲ ವಿದ್ಯಾರ್ಥಿಗಳು ಪರಿಪಾಠವಾಗಿಸಿಕೊಳ್ಳಲು ಹೊಸವರ್ಷವನ್ನು ಬಳಸಿಕೊಳ್ಳುವುದು ಸೂಕ್ತ.

**ಸಹಪಠ್ಯಗಳಿಗೂ ಆದ್ಯತೆ ಇರಲಿ:–** ಸೃಜನಶೀಲತೆಯನ್ನು ಹೊರ ತರಲು ಸಹಪಠ್ಯ ಚಟುವಟಿಕೆಗಳ ಪಾತ್ರ ಅತ್ಯಂತ ಮಹತ್ವದ್ದು. ಕೆಲಸಾರಿ ನಮಗರಿವಿಲ್ಲದೇ ಈ ಸಹಪಠ್ಯ ಚಟುವಟಿಕೆಗಳು ಬದುಕನ್ನು ಬದಲಿಸಬಲ್ಲವು ಅಥವಾ ರೂಪಿಸಬಲ್ಲವು. ತರಗತಿ ಮತ್ತು ಶಾಲೆಯಲ್ಲಿ ನಡೆವ ಸಹಪಠ್ಯದ ಎಲ್ಲಾ ಚಟುವಟಿಕೆಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ತೊಡಗಿಕೊಳ್ಳುವುದನ್ನು ಮರೆಯಬಾರದು. ಆಟ, ಮನೋರಂಜನೆ, ಹುಡುಗಾಟಗಳು ಸಹಜವಾಗಿ ಹೆಚ್ಚು ಇಷ್ಟವಾಗುತ್ತವೆ. ಹಾಗೆಂದು ಅವಕ್ಕೇ ದಾಸರಾಗದಂತೆ ಎಚ್ಚರಿಕೆ ವಹಿಸಬೇಕು. ಹಾಗಾಗಿ ಬರುವ ವರ್ಷ ಸಹಪಠ್ಯ ಚಟುವಟಿಕೆ ಸುವರ್ಣಯುಗ ಎಂದು ಪರಿಗಣಿಸಿದಲ್ಲಿ ನಮ್ಮ ಹಾದಿ ಸುಗಮವಾಗುತ್ತದೆ.

**ಇತರೆ ಪುಸ್ತಗಳ ಓದೂ ಇರಲಿ:–** ಪಠ್ಯಪುಸ್ತಕ ತಮ್ಮ ಬದುಕನ್ನು ರೂಪಿಸುವ ಮಹಾ ಗ್ರಂಥ ಎಂದು ಅನೇಕರು ನಂಬಿದ್ದಾರೆ. ಆದರೆ ಅದು ನಾವು ಸಾಗುವ ಹಾದಿಯನ್ನು ಮಾತ್ರ ತೋರಿಸುತ್ತದೆ ಎಂದು ಅನೇಕರು ತಿಳಿದಿಲ್ಲ. ಪಠ್ಯಕ್ಕೆ ಪೂರಕವಾಗಿ ಇತರೆ ಪುಸ್ತಕಗಳನ್ನು ಓದಿದಲ್ಲಿ ಮಾತ್ರ ಜ್ಞಾನ ವಿಸ್ತಾರವಾಗುತ್ತದೆ. ಕತೆ, ಕವನ, ಕಾದಂಬರಿ, ನಾಟಕ, ಭಾಷೆ, ವೈಜ್ಞಾನಿಕ ಸೇರಿದಂತೆ ಮಾಹಿತಿಗಳ ಕೋಶವೇ ಪುಸ್ತಕಗಳಲ್ಲಿ ಅಡಗಿದೆ. ಅಂತರಜಾಲಗಳಲ್ಲಿಯೂ ವಿನೂತನ ಅನ್ವೇಷಣೆ, ಪುಸ್ತಕಗಳು ಲಭ್ಯವಿವೆ. ನಾವು ಓದುವ ಮನಸ್ಸು ಮಾಡಬೇಕು ಅಷ್ಟೆ. ಅದನ್ನು ಪ್ರಾರಂಭಿಸಲು ಹೊಸ ವರ್ಷವನ್ನು ನೆಪ ಮಾಡಿಕೊಳ್ಳೋಣವೇ?



**ವೈಜ್ಞಾನಿಕ ಮನೋಭಾವ:–** ಕುತೂಹಲ ಮಕ್ಕಳಲ್ಲಿರುವ ಸಹಜ ಗುಣ. ಅದಕ್ಕೆ ಮಕ್ಕಳು ಹೆಚ್ಚು ಪ್ರಶ್ನೆ ಕೇಳುತ್ತಾರೆ. ಬುದ್ಧಿವಂತರು ಪ್ರಶ್ನೆ ಕೇಳದೇ ಯಾವುದನ್ನೂ ಒಪ್ಪಿಕೊಳ್ಳುವುದಿಲ್ಲ. ಅದರಿಂದ ಅನೇಕ ಸಂಗತಿಗಳು ಹೊರಬರುತ್ತವೆ. ಬಹಳ ಮುಖ್ಯವಾಗಿ ಮೌಢ್ಯತೆ, ಅನಾಚಾರ ಮುಂತಾದ ಅನಿಷ್ಟ ಪದ್ಧತಿಗಳಿಂದ ಹೊರಬರಬೇಕಾದರೆ ಅದರ ಹಿಂದಿನ ವೈಜ್ಞಾನಿಕತೆ ಅಗತ್ಯ. ಆ ದಿಕ್ಕಿನಲ್ಲಿ ನಮ್ಮ ಪಯಣವನ್ನು ಈ ನೂತನ ವರ್ಷದಿಂದ ಆರಂಭಿಸುವುದು ಸೂಕ್ತ . . . . . ಏನಂತಿರಾ?.

**ಹಿರಿಯರಿಗೆ ಗೌರವ :–** ಈಗಿನ ಮಕ್ಕಳು ದೊಡ್ಡವರಿಗೆ ಸ್ವಲ್ಪನೂ ಮರ್ಯಾದೆ ಕೊಡೋದಿಲ್ಲ ಎಂಬ ಮಾತು ಹೆಚ್ಚು ಪ್ರಚಲಿತದಲ್ಲಿದೆ. ಮಕ್ಕಳಿಗೆ ತಮ್ಮ ವರ್ತನೆಗಳು ಸರಿ ಎನ್ನುವಂತಿವೆ. ಅದರಿಂದ ಹೊರಬರಬೇಕಾದಲ್ಲಿ ತಂದೆ, ತಾಯಿ, ಗುರುಗಳು ಸೇರಿದಂತೆ ಹಿರಿಯರಿಗೆ ಗೌರವ ನೀಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಹಿರಿಯರ ಮಾತಿಗೆ ಅಸಡ್ಡೆ, ನಿಂದನೆ ಇತ್ಯಾದಿಗಳನ್ನು ಬಿಟ್ಟು, ಅವರನ್ನು ಗೌರವ ಪೂರ್ವಕವಾಗಿ ಕಂಡಲ್ಲಿ ವಿದ್ಯಾರ್ಥಿಗಳ ವ್ಯಕ್ತಿತ್ವ ಮತ್ತಷ್ಟು ಬೆಳಗುತ್ತದೆ.

**ಸಹಕಾರ ಮನೋಭಾವ:–** 'ನಾನು ಎಲ್ಲರಿಗಾಗಿ, ಎಲ್ಲರು ನನಗಾಗಿ' ಎಂಬ ಸಹಕಾರ ತತ್ವವನ್ನು ಪರಿಪಾಲಿಸಬೇಕು. ಅನೇಕ ಗೆಳೆಯರು ಸಂಕಷ್ಟದಲ್ಲಿರುವಾಗ ಸಾಧ್ಯವಾದಷ್ಟು ಸಹಾಯ ಮಾಡುವುದನ್ನು ಮರೆಯಬಾರದು. ಇಂದು ನಾವು ಇನ್ನೊಬ್ಬರಿಗೆ ಸಹಾಯ ಮಾಡಿದರೆ, ಮುಂದೆ ನಮ್ಮ ಕಷ್ಟದಲ್ಲಿ ಮತ್ತೊಬ್ಬರು ಕೈ ಹಿಡಿಯುತ್ತಾರೆ. ಇಂತಹ ಇತರೆ ಮಾನವೀಯ ಮೌಲ್ಯ ಗುಣಗಳನ್ನು ರೂಢಿಸಿಕೊಳ್ಳಲು ಮತ್ತು ಹೆಚ್ಚಿಸಿಕೊಳ್ಳಲು ಹೊಸ ವರ್ಷದ ಆರಂಭದಿಂದಲೇ ಪ್ರಯತ್ನಿಸೋಣ.


ನಾಡ ಪ್ರೇಮ:– 'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ' ಎಂಬ ಮಾತಿನಂತೆ ನಮ್ಮ ಹೆತ್ತ ತಾಯಿ ಮತ್ತು ತಾಯಿ ನಾಡು ಸ್ವರ್ಗಕ್ಕಿಂತ ಮಿಗಿಲಾದವು. ದೇಶಕ್ಕಾಗಿ ತಮ್ಮ ತನು, ಮನ, ಧನವನ್ನು ಅರ್ಪಿಸಿದ ಕೊಟ್ಯಾಂತರ ಜನರ ಶ್ರಮದಿಂದ ನಾವು ಇಂದು ನಗುತ್ತಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳೋಣ. ಅವರ ಬದುಕು, ಹೋರಾಟ, ದೇಶಭಕ್ತಿಗಳು ನಮಗೆ ದಾರಿದೀಪ. ಅವುಗಳನ್ನು ಅರಿಯುತ್ತಾ ಅವರಂತೆ ನಾಡು, ನುಡಿಗಳನ್ನು ಪ್ರೇಮಿಸಿದಲ್ಲಿ ಮಾತ್ರ ಅವು ಉಳಿಯುತ್ತವೆ. ಮುಂದೆ ನಮ್ಮನ್ನು ಉಳಿಸುತ್ತವೆ.

**ಪರಿಸರ ಕಾಳಜಿ:–** ಇಂದು ಪರಿಸರದ ಕುರಿತು ಸಾಕಷ್ಟು ಜಾಗೃತಿ ಮೂಡಿದ್ದರೂ ನಿರೀಕ್ಷಿತ ಫಲ ಸಿಗುತ್ತಿಲ್ಲ. ಉದ್ದುದ್ದ ಭಾಷಣ ಮಾಡುವುದೇ ಬೇರೆ, ಅದನ್ನು ಕಾರ್ಯ ರೂಪಕ್ಕೆ ಇಳಿಸುವುದೇ ಬೇರೆ. ನಮ್ಮಗಳ ತಪ್ಪಿನಿಂದ ಅನೇಕ ಸಸ್ಯಗಳು, ಪ್ರಾಣಿಗಳು ಸೇರಿದಂತೆ ಪರಿಸರ ವಿನಾಶದ ಅಂಚಿಗೆ ಬಂದು ನಿಂತಿವೆ. ಗಿಡಗಳನ್ನು ಮತ್ತು ಪ್ರಾಣಿಗಳನ್ನು ಪ್ರೀತಿಸಿ, ಬೆಳೆಸುವ ಕಾಯಕವನ್ನು ಈ ನೂತನ ವರ್ಷದಿಂದ ಎಲ್ಲರೂ ಆರಂಭಿಸಿದಲ್ಲಿ ಪರಿಸರದಲ್ಲಿ ಮತ್ತಷ್ಟು ಹಸಿರನ್ನು ಕಾಣಬಹುದು. ಅದಕ್ಕೆ ಸಿದ್ಧರಾಗೋಣವೇ?.

**ಸ್ವ ನಿಯಂತ್ರಣ:–** ಒತ್ತಡದ ಹಾಗೂ ಮೌಲ್ಯ ರಹಿತವಾಗುತ್ತಿರುವ ಬದುಕಿನಲ್ಲಿ ಸ್ವ ನಿಯಂತ್ರಣ ಮಾಡಿಕೊಳ್ಳುವುದು ಅತ್ಯಗತ್ಯ. ಮಾಧ್ಯಮಗಳು ಸೇರಿದಂತೆ ಅನೇಕ ಕಡೆಗಳಲ್ಲಿ ಮಕ್ಕಳು ನೋಡಬಾರದ್ದನ್ನು, ಕೇಳಬಾರದ್ದನ್ನು ನೋಡಿ-ಕೇಳಿ ಪ್ರೇರೇಪಿತವಾಗುವಂತಾಗಿದೆ. ಅದರ ಜೊತೆ ಕೆಟ್ಟ ಹವ್ಯಾಸ ಸ್ನೇಹಿತರ ಸಹವಾಸದಿಂದ ಅಗತ್ಯವಿಲ್ಲದ ಹವ್ಯಾಸಗಳತ್ತ ವಾಲುತ್ತಿದ್ದೇವೆ. ಅದಕ್ಕೆ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕು. ಅದು ಕೆಟ್ಟದ್ದು ಎಂದ ತಕ್ಷಣ ಹಿಂದೆ ಸರಿಯಬೇಕು. ಇದು ನನಗೆ ಹಾಗೂ ನನ್ನ ಗುರಿಗೆ ಅಗತ್ಯವಿಲ್ಲ ಎಂದು ತಿಳಿದು ಅವುಗಳಿಂದ ದೂರಸಾಗಲು, ಅಂತಹ ಇನ್ನು ಹಲವು ನಿರ್ಧಾರ ತೆಗೆದುಕೊಳ್ಳಲು ಹೊಸ ವರ್ಷ ಅತ್ಯಂತ ಸೂಕ್ತ ಸಮಯ ಎಂಬುದನ್ನು ಮರೆಯಬೇಡಿ.

ಇವುಗಳ ಜೊತೆಗೆ ಇನ್ನೂ ಅನೇಕ ಅಂಶಗಳನ್ನು ಅಳವಡಿಸಿಕೊಳ್ಳಲು ಹೊಸವರ್ಷವನ್ನು ಬದಲಾವಣೆಯ ಪರ್ವ ಎಂದು ಪರಿಗಣಿಸಬೇಕು. ಒಂದಂತೂ ಸತ್ಯ, ನಮ್ಮ ಬದುಕನ್ನು ಯಾರೂ ಉದ್ಧರಿಸಲಾರರು. ತಂದೆ, ತಾಯಿ, ಗುರು, ಹಿರಿಯರು ದಿಕ್ಸೂಚಿಯಂತೆ ಉತ್ತಮ ಮಾರ್ಗಗಳನ್ನು ತೋರಿಸಬಲ್ಲರು ಅಷ್ಟೆ. ಆ ಹಾದಿಯಲ್ಲಿ ಮುನ್ನೆಡೆಯುವುದು ನಮ್ಮಗಳ ಜವಾಬ್ದಾರಿ. ನಮ್ಮಗಳ ಗುರಿ ತಲುಪಲು ಅಡ್ಡದಾರಿ ಹಿಡಿಯದೆ, ನಾವೇ ಶ್ರಮ ಹಾಕಿ ಮುಂದೆ ಸಾಗಬೇಕು. ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ. ಈ ನಿಟ್ಟಿನಲ್ಲಿ ಹೊಸ ಆಲೋಚನೆ, ಕನಸುಗಳನ್ನು ಕಟ್ಟಿಕೊಂಡು ಮುನ್ನಡೆಯಲು ಹೊಸವರ್ಷವನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ನಮ್ಮ ಎಲ್ಲಾ ಮಕ್ಕಳು ಈ ರೀತಿ ಮನಸ್ಸು ಮಾಡಿ ಮುಂದೆ ಸಾಗುತ್ತಾರೆ ಎನ್ನುವ ಭರವಸೆಯೊಂದಿಗೆ, ಎಲ್ಲಾ ಮುದ್ದು ಮಕ್ಕಳಿಗೂ 2024ನೇ ಸಾಲಿನ ಹೊಸ ವರ್ಷ ಮತ್ತಷ್ಟು ಹರುಷ ತರುವುದರ ಜೊತೆಗೆ ಅವರ ಎಲ್ಲಾ ಕನಸುಗಳು ನನಸಾಗಿಸಲಿ ಎಂಬುದು **'ಹಂಪಿ ಟೈಮ್ಸ್'** ಪತ್ರಿಕೆಯ ಹಾರೈಕೆ.

# ಹನುಮ ಸಂಭ್ರಮ: ವಿದ್ಯುದೀಪಗಳಿಂದ ಅಲಂಕಾರಗೊಂಡ ಅಂಜನಾದ್ರಿ




**ಹಂಪಿ ಟೈಮ್ಸ್ ಕೊಪ್ಪಳ**

ಡಿಸೆಂಬರ್ 23 ಮತ್ತು ಡಿಸೆಂಬರ್ 24 ರಂದು ನಡೆಯಲಿರುವ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಅಂಜನಾದ್ರಿಯಲ್ಲಿ ಅಕ್ಷರಶಃ ಹಬ್ಬದ ಸಂಭ್ರಮ ಮನೆ ಮಾಡಿದೆ.

ಹಿಂದೆಂದಿಗಿಂತಲೂ ಈ ಭಾರಿ ಹೆಚ್ಚಿನ ರೀತಿಯಲ್ಲಿ ಅಂಜನಾದ್ರಿಯಲ್ಲಿ ಹಬ್ಬದ ಸಂಭ್ರಮ ಕಾಣಬೇಕು. ಜನರಿಗೆ ಉತ್ತಮ ಸಂದೇಶ ಹೋಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಅಧಿಕಾರಿಗಳಿಗೆ ಹಲವಾರು ಬಾರಿ ಸಭೆಯಲ್ಲಿ ಸೂಚನೆ ನೀಡಿದ್ದರು. ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಲಂಕಾರ ಸಮಿತಿಯನ್ನು ರಚಿಸಿ ಬೆಟ್ಟದ ಅಲಂಕಾರಕ್ಕು ಸಹ ಅಷ್ಟೇ ಆದ್ಯತೆ ನೀಡಬೇಕು ಎಂದು ಸಂಬಂಧಿಸಿದ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರಿಗೆ ಮೇಲಿಂದ ಮೇಲೆ ನಿರ್ದೇಶನ ನೀಡಿ ಮಾರ್ಗದರ್ಶನ ಮಾಡಿದ್ದರು.

ಹನುಮಮಾಲಾ ಕಾರ್ಯಕ್ರಮದ ಮುನ್ನಾ ದಿನವಾದ ಡಿಸೆಂಬರ್ 22ರಂದು ಅಂಜನಾದ್ರಿಯ ಬೆಟ್ಟವು ಬಗೆಬಗೆಯ ಬಣ್ಣದ ವಿದ್ಯೂದೀಪಗಳಿಂದ ಅಲಂಕಾರಗೊಂಡು ಜನಮನ ಸೆಳೆಯುತ್ತಿದೆ.

ಅಲಂಕಾರಕ್ಕೆ ಮೆಚ್ಚುಗೆ: ಡಿಸೆಂಬರ್ 22ರಂದು ಅಂಜನಾದ್ರಿಗೆ ಭೇಟಿ ನೀಡಿದ ವೇಳೆ ಬಗೆಬಗೆಯ ವಿದ್ಯುದೀಪಗಳಿಂದ ಅಲಂಕೃತಗೊಂಡು ಬಹುಚೆಂದವಾಗಿ ಕಂಡ ಅಂಜನಾದ್ರಿ ಬೆಟ್ಟದ ಸೊಬಗನ್ನು ಕಂಡು ಸಂಬಂಧಿಸಿದ ಅಧಿಕಾರಿಗಳ ಕಾರ್ಯವೈಖರಿಗೆ ಜಿಲ್ಲಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.



# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



Spend LESS and get MORE publicity

BENEFITS OF ADVERTISING
in Local Leading HAMPI TIMES Newspaper

1. Flexibility
2. Timeliness
3. Affordability
4. Engaged audience
5. Positive response
6. Targeted demographic
7. Trustworthy medium
8. Design options



CALL US : 9448633038

Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:191 • ನೋಂದಣಿ ನಂ.:KARKAN27911 • ವಿಜಯನಗರ • 23.12.2023 • ಶನಿವಾರ • ಪುಟ:04 • ಬೆಲೆ:2

Volume:01 • Issue:191 • Reg.No:KARKAN27911 • VIJAYANAGARA • 23.12.2023 • Saturday • Page:04 • Rs:2


## ರಾಜ್ಯ ಮಟ್ಟದ ಇಂಗ್ಲಿಶ್-ಕನ್ನಡ ಯುವ ಭಾಷಾಂತರ ತರಬೇತಿ ಕಮ್ಮಟ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಕೇಂದ್ರ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ (IQAC)ವು ಜಂಟಿಯಾಗಿ ರಾಜ್ಯ ಮಟ್ಟದ ಇಂಗ್ಲಿಶ್–ಕನ್ನಡ ಯುವ ಭಾಷಾಂತರ ತರಬೇತಿ ಕಮ್ಮಟವನ್ನು 2024ರ ಫೆಬ್ರವರಿ 09 ರಿಂದ 11ರವರೆಗೆ ಮೂರು ದಿನಗಳ ಕಾಲ ಕನ್ನಡ ವಿಶ್ವವಿದ್ಯಾಲಯದ ಆವರಣ ವಿದ್ಯಾರಣ್ಯದಲ್ಲಿ ನಡೆಸಲು ಯೋಜಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಭಾಗವಹಿಸುವುದು. ಕಮ್ಮಟ ನಡೆಯುವ ಮೂರು ದಿನಗಳು ಭಾಗವಹಿಸಿದವರಿಗೆ ಮಾತ್ರ ಪ್ರಮಾಣ ಪತ್ರವನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 94489 97450 ಎಂದು ಭಾಷಾಂತರ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ


## ಡಿ.26ರಿಂದ ನೂತನ ನ್ಯಾಯಾಲಯಗಳು ಕಾರ್ಯಾರಂಭ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಹಳೆಯ ಜಿಲ್ಲಾ ನ್ಯಾಯಾಲಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನ್ಯಾಯಾಲಯಗಳು ಸ್ಥಳಾಂತರ ಮಾಡಲಾಗಿದ್ದು, ನಗರದ ತಾಳೂರು ರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಇದೇ ಡಿ.26 ರಿಂದ ಕಾರ್ಯ ನಿರ್ವಹಿಸಲಿವೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಹೆಚ್.ಪುಷ್ಪಾಂಜಲಿ ದೇವಿ ಅವರು ತಿಳಿಸಿದ್ದಾರೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ ನ್ಯಾಯಾಲಯ, 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಲಯ, 2ನೇ ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, 1ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, 2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, 3ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, 4ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, 5ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯವು ಸೇರಿದಂತೆ ಡಿ.26ರಿಂದ ನಗರದ ತಾಳೂರು ರಸ್ತೆಯ ನೂತನ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದ್ದಾರೆ.

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 22-12-2023**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.74 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 869 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.817ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.83 ಅಡಿ |
| ಒಳ ಹರಿವು | 1624 ಕ್ಯುಸೆಕ್ |
| ಹೊರ ಹರಿವು | 8030 ಕ್ಯುಸೆಕ್ |
| ಸಾಮರ್ಥ್ಯ | 82.633 ಟಿಎಂಸಿ |


**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.


# ಯುವ ಮತದಾರರ ಸೇರ್ಪಡೆಗೆ ಕಾಲೇಜುಗಳಲ್ಲಿ ಜಾಗೃತಿ ಆರಂಭಿಸಿ

## ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಸೂಚನೆ



**ಹಂಪಿ ಟೈಮ್ಸ್ ಹೊಸಪೇಟೆ**

ಮತದಾರರ ಪಟ್ಟಿಯಲ್ಲಿ ಯುವಮತದಾರರನ್ನ ಸೇರ್ಪಡೆ ಮಾಡಲು ಜಾಗೃತಿ ಮೂಡಿಸಬೇಕು ಎಂದು ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಅವರು ಹೇಳಿದರು.

ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2024, ಯುವ ಮತದಾರರ ನೋಂದಣಿ ಸಂಬಂಧ ಗುರುವಾರ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಲು ಹೊಸಮತದಾರರಿಗೆ ಆದ್ಯತೆ ನೀಡಬೇಕು. ಕಾಲೇಜುಗಳಿಗೆ ಭೇಟಿ ನೀಡಿ 18 ವರ್ಷ ಮೇಲ್ಪಟ್ಟ ಎಲ್ಲಾ ಯುವ ಮತದಾರರನ್ನು ನೋಂದಾಯಿಸಬೇಕು. ಹಾಗೆಯೇ ಮನೆ ಮನೆಗೆ ಭೇಟಿ ನೀಡಿ ಮತದಾರರ ಪಟ್ಟಿಗೆ ಮತದಾರರ ಹೆಸರು ಸೇರ್ಪಡೆಗೆ ಮುಂದಾಗಬೇಕು. ವಲಸಿಗರು, ಆದಿವಾಸಿಗಳು, ಕಾರ್ಮಿಕರು, ವಿಶೇಷ ಚೇತನರು ಹೀಗೆ ಅರ್ಹ ಮತದಾರರ ಬಗ್ಗೆ ಗಮನಹರಿಸಬೇಕು. ಮತದಾನದ ಹಕ್ಕನ್ನು ಚಲಾಯಿಸುವ ಮಹತ್ವದ ಬಗ್ಗೆ ಯುವ ಮತದಾರರಲ್ಲಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಯುವ ಮತದಾರರ ನೋಂದಣಿ ಹಾಗೂ ಮತದಾನ ಪ್ರಕ್ರಿಯೆ ಹಾಗೂ ಜಿಲ್ಲೆಯ ಸ್ವೀಪ್ ಚಟುವಟಿಕೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳ ಮೂಲಕವು ವಿಶೇಷ ಜಾಗೃತಿ ಮೂಡಿಸಿ. ಮತದಾರರ ನೋಂದಣಿ ಮತ್ತು ಮತದಾನದ ಮೂಲಕ ಚುನಾವಣಾ ಭಾಗವಹಿಸುವಿಕೆ ಹೆಚ್ಚಾಗಲಿದ್ದು, ಈ ಹಿನ್ನೆಲೆಯಲ್ಲಿ ಎಲ್ಲಾ ಕಚೇರಿಗಳಲ್ಲಿ ಮತದಾನದ ಜಾಗೃತಿಕಾರ್ಯಕ್ರಮಗಳನ್ನುಹಮ್ಮಿಕೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಎಲ್ಲಾ ನೌಕರರ ಹೆಸರಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಎಲ್ಲರಿಗೂ ವೋಟರ್ ಹೆಲ್ಪ್‌ಲೈನ್ ಆ್ಯಪ್, ಸಹಾಯವಾಣಿ ಸಂಖ್ಯೆ: 1950ರ ಅರಿವು ಮೂಡಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ. ಅವರು ಮಾತನಾಡಿ, ವಿಶೇಷ ಮತದಾರರ ಪಟ್ಟಿಯ ಪರಿಶೀಲನಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜಿಲ್ಲಾ ಸ್ವೀಪ್ ಕಾರ್ಯಕ್ರಮದಡಿ ಬಿ.ಎಲ್.ಓಗಳ ಮನೆ ಮನೆ ಭೇಟಿ, ಮತದಾರರ ಜಾಗೃತಿ ಕ್ಲಬ್‌ಗಳಿಂದ, ಎನ್.ಆರ್.ಎಲ್.ಎಂ ಸ್ವ–ಸಹಾಯ ಸಂಘಗಳ ಮಹಿಳಾ ಸದಸ್ಯರಿಗೆ ವಿಷೇಶ ಮತದಾರರ ಪಟ್ಟಿಯ ಪರಿಶೀಲನಾ ಕಾರ್ಯಕ್ರಮ ಹಾಗೂ ಮಹಿಳಾ ಸದಸ್ಯರಿಂದ ಮನೆ ಮನೆ ಭೇಟಿ ಮೂಲಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ 6 ತಾಲ್ಲೂಕಿನ 137 ಗ್ರಾಮ ಪಂಚಾಯಿತಿಗಳಲ್ಲಿ ಕಸ ವಿಲೇವಾರಿ ವಾಹನಗಳ ಮೂಲಕ ಮತದಾನ ಜಾಗೃತಿ ಮೂಡಿಸಲಾಗಿದೆ. ವಿದ್ಯಾರ್ಥಿಗಳಿಗೆ ರಸ ಪ್ರಶ್ನೆ, ಪ್ರಬಂಧ, ಬಿತ್ತಿ ಚಿತ್ರ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ವಿವಿಧ ಹುದ್ದೆಗಳ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಆಹ್ವಾನ

## ಡಿ.29ರ ಸಂಜೆ 5ರ ಒಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷಪಣೆ ಸಲ್ಲಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದಿಂದ ವಿವಿಧ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗೆ ಆಹ್ವಾನಿಸಲಾಗಿದೆ.

ವಿಜಯನಗರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಎನ್.ಎಲ್.ಇ.ಪಿ., ಎನ್.ಎಂ.ಹೆಚ್.ಪಿ ಕಾರ್ಯಕ್ರಮದಡಿ ಮಂಜೂರಾಗಿರುವ ಜಿಲ್ಲಾ ಕುಷ್ಠರೋಗ ಸಲಹೆಗಾರ, ಸಮುದಾಯ ಸ್ಟಾಫ್ ನರ್ಸ್, ಸೈಕಿಯಾಟ್ರಿಕ್ ನರ್ಸ್ ಹುದ್ದೆಗೆ ಅರ್ಜಿ ಆಹ್ವಾನಿಸಿ, ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಈ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರು ಆಕ್ಷಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಡಿ.29ರ ಸಂಜೆ 5ರ ಒಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತರೂಪದಲ್ಲಿಆಕ್ಷಪಣೆಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ತಿಳಿಸಿದ್ದಾರೆ.

# ಡಿ.25ಕ್ಕೆ ಶ್ರೀ ಗುರು ಕೊಟ್ಟೂರೇಶ್ವರ ಕಾರ್ತಿಕೋತ್ಸವ

## ಪ.ಪಂ. ಪೌರಕಾರ್ಮಿಕರಿಂದ ಸ್ವಚ್ಛತಾ ಕಾರ್ಯ । ರಸ್ತೆಯುದ್ದಕ್ಕೂ ದೀಪೋತ್ಸವಕ್ಕೆ ಸಿದ್ಧತೆ

**ಹಂಪಿ ಟೈಮ್ಸ್ ಕೊಟ್ಟೂರು**

ಡಿ.25ಕ್ಕೆ ಸೋಮವಾರ ಪಟ್ಟಣದ ಆರಾಧ್ಯ ದೇವರು ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಜರುಗುವ ಪ್ರಯುಕ್ತ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪ.ಪಂ. ಮುಖ್ಯಾಧಿಕಾರಿ ಎ.ನಸರುಲ್ಲಾ ಅವರ ಸೂಚನೆ ಮೇರೆಗೆ, ಕಳೆದ ಒಂದು ವಾರದಿಂದ ಸ್ವಚ್ಛತಾ ಕಾರ್ಯಕ್ಕೆ ಪೌರಕಾರ್ಮಿಕರು ಮುಂದಾಗಿದ್ದಾರೆ. ಇದರೊಟ್ಟಿಗೆ ಪಪಂ ಆಡಳಿತ ಮುಂಜಾಗ್ರತೆಯಾಗಿ ಸಕಲ ಸಿದ್ಧತೆಗಳನ್ನೂ ಕೈಗೊಂಡಿದೆ.

ಕಳೆದ 2–3 ವರ್ಷಗಳಲ್ಲಿ ಕರೋನದ ಕರಿನೆರಳಿನಿಂದ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಕಾರ್ತಿಕೋತ್ಸವ ಮತ್ತು ಲಕ್ಷ ದೀಪೋತ್ಸವಕ್ಕೆ ಗ್ರಹಣ ಹಿಡಿದಂತಾಗಿ, ಧಾರ್ಮಿಕ ಆಚರಣೆಗೆ ಮಾತ್ರ ಕಾರ್ತಿಕೋತ್ಸವ ಸೀಮಿತವಾಗಿತ್ತು. ಪ್ರಸ್ತುತ ವರ್ಷ ಯಾವುದೇ ಸಾಂಕ್ರಾಮಿಕ ರೋಗದ ಭಯ ಅಷ್ಟೊಂದು ಇಲ್ಲದ ಕಾರಣ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಶ್ರೀಸ್ವಾಮಿಯ ಕಾರ್ತಿಕೋತ್ಸವಕ್ಕೆ ಆಗಮಿಸುವ ನಿರೀಕ್ಷೆಯಿದ್ದು ರಸ್ತೆಯ ಅಕ್ಕಪಕ್ಕದ ನುಸಿ ಧೂಳು ಭಕ್ತರ ಅನಾರೋಗ್ಯಕ್ಕೆ ಕಾರಣ ಆಗದಿರಲೆಂದು ರಸ್ತೆಗಳನ್ನು ಪೌರಕಾರ್ಮಿಕರು ಸ್ವಚ್ಛತೆ ಮಾಡಿದರು. ಈ ಬಾರಿ ಮೊದಲಿನಂತೆ ತೇರು ಬಯಲು ಬಸವೇಶ್ವರ ದೇವಸ್ಥಾನದಿಂದ ಶ್ರೀ ಕೊಟ್ಟೂರೇಶ್ವರ ಸ್ವಾಮಿಯ ದ್ವಾರ ಬಾಗಿಲವರೆಗೆ ರಸ್ತೆಯುದ್ದಕ್ಕೂ, ಇಕ್ಕೆಲುಗಳಲ್ಲಿ ದೀಪಗಳು ಬೆಳಗಲು ಶ್ರೀ ಗುರು ಕೊಟ್ಟೂರೇಶ್ವರ ಕಲ್ಯಾಣ ಮಂಟಪ ಸಮಿತಿಯು ಸಕಲ ಸಿದ್ಧತೆ ಕೈಗೊಂಡಿದೆ. ಸ್ವಚ್ಛತೆ ವೇಳೆ ಪ.ಪಂ. ಪೌರಕಾರ್ಮಿಕ ಸೂಪರ್ ವೈಜರ್ ಹೇಮನಗೌಡ್ರ, ಮೇಸ್ತ್ರಿ ಮಾದೂರ್ ಕೊಟ್ರೇಶ್, ಬಾಣದರಮೇಶ್ ಸೇರಿದಂತೆ ಪೌರಕಾರ್ಮಿಕರು ಹಾಜರಿದ್ದರು.



# ಕೃಷಿ ಭಾಗ್ಯ ಯೋಜನೆಯಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕೃಷಿ ಇಲಾಖೆಯಿಂದ ಕೃಷಿ ಭಾಗ್ಯ ಯೋಜನೆಯಡಿ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕೃಷಿ ಭಾಗ್ಯ ಯೋಜನೆಯು ಅತ್ಯಂತ ಜನಪ್ರಿಯ ಹಾಗೂ ಉಪಯುಕ್ತವಾಗಿತ್ತು. ಈ ಯೋಜನೆಯನ್ನು ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯೊಂದಿಗೆ ಸಂಯೋಜಿಸಿ 100 ಕೋಟಿ ರೂ. ವೆಚ್ಚದಲ್ಲಿ ಮರು ಜಾರಿಗೊಳಿಸಲಾಗುವುದು ಎಂದು ಸರ್ಕಾರ ಘೋಷಿಸಿದೆ.

ಪ್ರಸ್ತುತ ವರ್ಷದಲ್ಲಿ ವಿಜಯನಗರ ಜಿಲ್ಲೆಯ ಒಟ್ಟು 6 ತಾಲ್ಲೂಕುಗಳಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಸಾಮಾನ ವರ್ಗದ ರೈತರಿಗೆ ಶೇ.80ರಷ್ಟು ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ರೈತರಿಗೆ ಶೇ.90ರಷ್ಟು ಸಹಾಯಧನದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದ ಮಳೆಯಾಶ್ರಿತ ಕೃಷಿಯನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು. ಸಮರ್ಪಕ ಮಳೆ ನೀರಿನ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಉತ್ತಮ ಪಡಿಸುವುದು ಮತ್ತು ಆದಾಯವನ್ನು ಹೆಚ್ಚಿಸುವುದು. ಮಳೆ ನೀರನ್ನು ವ್ಯರ್ಥ ಮಾಡದೆ ಆಯ್ದ ಸ್ಥಳದಲ್ಲಿ ಕೃಷಿ ಹೊಂಡ ತೆಗೆದು ಜಲ ಸಂಗ್ರಹಿಸಿ, ಬೆಳೆಗಳ ಸಂದಿಗ್ಧ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಅರ್ಜಿ ಸಲ್ಲಿಸಲು ರೈತರ ಒಟ್ಟು ಸಾಗುವಳಿ ಕ್ಷೇತ್ರದ ಒಂದು ಸರ್ವೆ ನಂಬರ್‌ನಲ್ಲಿ ಕನಿಷ್ಠ 1 ಎಕರೆ ಇರಬೇಕು. ಹಿಂದಿನ ಸಾಲುಗಳಲ್ಲಿ ಕೃಷಿ ಭಾಗ್ಯ ಯೋಜನೆ ಅಥವಾ ಯಾವುದೇ ಯೋಜನೆಯಡಿ ಕೃಷಿ ಹೊಂಡ ಫಲಾನುಭವಿಯಾಗಿರುವ ರೈತರು ಈ ಯೋಜನೆಗೆ ಅರ್ಹತೆ ಹೊಂದಿರುವುದಿಲ್ಲ. ಆಯ್ಕೆಯಾದ ಜಿಲ್ಲೆ, ತಾಲ್ಲೂಕಿನ ಅಚ್ಚುಕಟ್ಟು ಪ್ರದೇಶ ಹೊರತುಪಡಿಸಿ ಫಲಾನುಭವಿ ರೈತರನ್ನು ಆಯ್ಕೆ ಮಾಡಲಾಗುವುದು.

ಆಸಕ್ತ ರೈತರು ಅರ್ಜಿ ನಮೂನೆಯನ್ನು ಸಂಬಂಧಿಸಿದ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಪಡೆದು ಡಿ.31 ರೊಳಗಾಗಿ ಸಲ್ಲಿಸಬೇಕು. ಯೋಜನೆ ಸಂಪೂರ್ಣ ವಿವರ, ಅರ್ಹತೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಅಥವಾ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಬಿ ಮುದಗಲ್ ತಿಳಿಸಿದ್ದಾರೆ.

# ಜೀವನವೇ ಲೆಕ್ಕಾಚಾರ

## ಜ್ಞಾನಭಾರತಿ ಆಡಳಿತಾಧಿಕಾರಿ ಜಿ.ಆರ್.ರಾಜು ಹೇಳಿಕೆ

## ಗಣಿತ ದಿನಾಚರಣೆಯಲ್ಲಿ ರಾಮಾನುಜನ್ ಸ್ಮರಣೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ನಿತ್ಯ ಮನುಷ್ಯನ ಜೀವನದಲ್ಲಿ ಗಣಿತ ಒಂದಲ್ಲ ಒಂದು ರೂಪದಲ್ಲಿ ಬಳಕೆಯಾಗುತ್ತಲೇ ಇರುತ್ತದೆ, ಅದು ದೊಡ್ಡ ಮಟ್ಟದಲ್ಲಿರಬಹುದು, ಇಲ್ಲವೇ ಸಣ್ಣ ಮಟ್ಟದಲ್ಲಿರಬಹುದು, ಲೆಕ್ಕಕ್ಕೂ–ಮನುಷ್ಯ ಜೀವನಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಜ್ಞಾನಭಾರತಿ ಸಮೂಹ ಸಂಸ್ಥೆಯ ಆಡಳಿತಾಧಿಕಾರಿ ಜಿ.ಆರ್.ರಾಜು ತಿಳಿಸಿದರು.

ಪಟ್ಟಣದ ಜ್ಞಾನಭಾರತಿ ಪ್ರೌಢಶಾಲೆಯಲ್ಲಿ ಶುಕ್ರವಾರ ಶ್ರೇಷ್ಠ ಗಣಿತಜ್ಞ ಶ್ರೀನಿವಾಸ ರಾಮಾನುಜನ್ ಜನ್ಮದಿನದ ಪ್ರಯುಕ್ತ ರಾಷ್ಟ್ರೀಯ ಗಣಿತ ದಿನದ ಆಚರಣೆಯಲ್ಲಿ ಭಾಗಿಯಾಗಿ ಮಾತನಾಡಿದರು.

ದಿನವು ನಮ್ಮ ಜೀವನದಲ್ಲಿ ಗಣಿತದ ಪ್ರಾಮುಖ್ಯತೆಯನ್ನು ಗುರುತಿಸುವುದು, ಸ್ವಯಂ–ಕಲಿಕೆ ಮತ್ತು ತಾರ್ಕಿಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಜನರನ್ನು ಪ್ರೋತ್ಸಾಹಿಸುವುದು ಈ ದಿನದ ಮಹತ್ವವಾಗಿದೆ ಎಂದು ತಿಳಿಸಿದ ಅವರು, ರಾಷ್ಟ್ರೀಯ ಗಣಿತ ದಿನ ಆಚರಣೆಯ ಮಹತ್ವವನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸಬೇಕಿದೆ, ಮಾನವೀಯತೆಯ ಬೆಳವಣಿಗೆ, ಗಣಿತದ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಸಹ ರಾಷ್ಟ್ರೀಯ ಗಣಿತ ದಿನ ಆಚರಣೆಯ ಹಿಂದಿನ ಮುಖ್ಯ ಉದ್ದೇಶವಾಗಿದೆ. ರಾಷ್ಟ್ರದ ಯುವ ಪೀಳಿಗೆಗೆ ಗಣಿತ ಕ್ಷೇತ್ರಕ್ಕೆ ಕೊಡುಗೆ ನೀಡಿದ ನಮ್ಮದೇ ದೇಶದ ಗಣಿತಜ್ಞ ಶ್ರೀನಿವಾಸ ರಾಮಾನುಜನರ್ ರವರ ಕೊಡುಗೆಗಳನ್ನು ತಿಳಿಸುವುದು, ಯುವ ಪೀಳಿಗೆಯಲ್ಲಿ ಗಣಿತವನ್ನು ಕಲಿಯಲು ಪ್ರೇರೇಪಿಸಲು, ಯುವಕರಲ್ಲಿ ಗಣಿತ ಕಲಿಕೆಯಿಂದ ಆಗುವ ಉಪಯೋಗಗಳನ್ನು ತಿಳಿಸುವುದು ಈ ದಿನದ ಆಚರಣೆಯ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ವಿಧ್ಯಾರ್ಥಿಗಳು ಗಣಿತದ ಸರಳ ಸೂತ್ರಗಳು, ಚಿಹ್ನೆಗಳು ಹಾಗೂ ಗಣಿತ ಆಕೃತಿಗಳನ್ನು ರಂಗೋಲಿ ಮೂಲಕ ಚಿತ್ರಿಸಿ ಅದನ್ನು ವಿದ್ಯಾರ್ಥಿಗಳಿಗೆ ವಿವರಿಸಿ, ಗಣಿತಜ್ಞ ಶ್ರೀನಿವಾಸ್ ರಾಮಾನುಜನ್ ಅವರ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಿದರು. ಉಪನ್ಯಾಸಕ ಅಜೇಯ್, ಶಿಕ್ಷಕರಾದ ಗುಪ್ಪಾಲ್ ಕೊಟ್ರೇಶ್, ಕೆ.ವಿ.ಎಂ.ಮಂಜುನಾಥ, ಕೆ.ಎಂ.ಕೊಟ್ರೇಶ್, ಗೀತಾ, ಸಿ.ಭಾರತಿ, ಬಿ.ಕಾಳಮ್ಮ ಸೇರಿದಂತೆ ವಿಧ್ಯಾರ್ಥಿಗಳು ಭಾಗಿಯಾಗಿದ್ದರು.

# ದೌರ್ಜನ್ಯ ತಡೆಯುವಲ್ಲಿ ಸರ್ಕಾರ ವಿಫಲ: ಆರೋಪ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿದ್ದು, ತಕ್ಷಣವೇ ಕಡಿವಾಣ ಹಾಕಬೇಕು. ಇಲ್ಲವೇ ಸರ್ಕಾರದ ವಿರುದ್ಧ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನ ನಾಯ್ಕ ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ದಲಿತರು, ಅಲ್ಪಸಂಖ್ಯಾತರ ರಕ್ಷಣೆಯ ಹೆಸರಲ್ಲೇ ಅಧಿಕಾರಕ್ಕೆ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಲ್ಲಿ ತಳಸಮುದಾಯಗಳ ಜನರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಬೆಳಗಾವಿಯಲ್ಲಿ ಚಳಿಗಾಲ ಅಧಿವೇಶನ ನಡೆಯುತ್ತಿರುವಾಗಲೇ ಅದೇ ಜಿಲ್ಲೆಯ ವಂಟಮೂರಿಯಲ್ಲಿ ದಲಿತ ಮಹಿಳೆಯನ್ನು ವಿವಸ್ತ್ರಗೊಳಿಸಿರುವುದು, ಕೋಲಾರ ಜಿಲ್ಲೆಯ ಮೊರಾರ್ಜಿ ಶಾಲೆಯಲ್ಲಿ ದಲಿತ ಮಕ್ಕಳನ್ನು ಶೌಚ ಗುಂಡಿಗೆ ಇಳಿಸಿದ ಪ್ರಕರಣಗಳು ನಡೆದಿವೆ. ತಾನು ದಲಿತರ ಪರ ಎಂದು ಹೇಳಿ ಕೊಳ್ಳುತ್ತಿರುವ ಸರ್ಕಾರ, ದಲಿತ, ಹಿಂದುಳಿದ ಸಮುದಾಯದವರ ಹಿತ ಕಾಪಾಡುವಲ್ಲಿ ವಿಫಲವಾಗಿದೆ. ಕಾಂಗ್ರೆಸ್ ಸರ್ಕಾರದ ಭರವಸೆಗಳು ಹೇಳಿಕೆಗೆ ಸೀಮಿತವಾಗಿವೆ ಎಂದು ಆರೋಪಿಸಿದರು.

ರಾಜ್ಯಾದ್ಯಂತ ದಾಖಲಾಗಿರುವ ಒಟ್ಟು ಪ್ರಕರಣಗಳಲ್ಲಿ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ, ಮಹಿಳೆ ಹಾಗೂ ಮಕ್ಕಳ ಮೇಲಿನ ಅಪರಾಧಗಳ ಪ್ರಕರಣಗಳು ಕಳೆದ 5 ತಿಂಗಳಲ್ಲಿ ಶೇ.40 ರಷ್ಟು ಹೆಚ್ಚಾಗಿದೆ. ಉಳಿದಂತೆ ಕೊಲೆ, ದರೋಡೆ ದಂಬಿ, ಸುಲಿಗೆ ಮುಂತಾದ ಅಪರಾಧಗಳು ಶೇ.48 ರಷ್ಟು ದಾಖಲಾಗಿವೆ. ಸರ್ಕಾರ ಕೂಡಲೇ ಆಡಳಿತವನ್ನು ಬಿಗಿಗೊಳಿಸಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಹಾಗೂ ಹಿಂದುಳಿದ ವರ್ಗದವರ ಮೇಲಾಗುತ್ತಿರುವ ದೌರ್ಜನ್ಯ, ಅಪರಾಧ ಕೃತ್ಯಗಳನ್ನು ತಡೆಗಟ್ಟಬೇಕು. ತಪ್ಪಿದಲ್ಲಿ ಬಿಜೆಪಿ ವತಿಯಿಂದ ರಾಜ್ಯದಾದ್ಯಂತ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ತಾಲ್ಲೂಕು ಘಟಕದ ಅಧ್ಯಕ್ಷ ಕಾಸೆಟ್ಟಿ ಉಮಾಪತಿ, ತಾಲ್ಲೂಕು ಮಾಧ್ಯಮ ಸಂಚಾಲಕಿ ಅನುರಾಧಾ ಉಪಸ್ಥಿತರಿದ್ದರು.

# ಮೇವು ಲಭ್ಯತೆ ಮಾಹಿತಿ ಸಲ್ಲಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲ್ಲೂಕಿನ ರೈತರು ತಮ್ಮಲ್ಲಿರುವ ಹೆಚ್ಚುವರಿ ಮೇವು ಲಭ್ಯತೆಯ ಮಾಹಿತಿ ಸಲ್ಲಿಸುವಂತೆ ತಾಲೂಕು ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ತಹಶೀಲ್ದಾರ ವಿಶ್ವಜಿತ್ ಮೆಹ್ತಾ ಅವರು ತಿಳಿಸಿದ್ದಾರೆ.

ಹೊಸಪೇಟೆ ತಾಲ್ಲೂಕನ್ನು ಈಗಾಗಲೇ ಬರ ಪೀಡಿತ ಪ್ರದೇಶ ಎಂದು ಸರ್ಕಾರ ಘೋಷಣೆ ಮಾಡಿದ್ದು, ಜಾನುವಾರುಗಳಿಗೆ ಅಗತ್ಯವಿರುವ ಮೇವು ಖರೀದಿ ಮಾಡಬೇಕಾಗಿರುತ್ತದೆ. ಹೊಸಪೇಟೆ ತಾಲ್ಲೂಕಿನ ರೈತರ ಬಳಿ ಇರುವ ಮೇವಿಗೆ ಒಂದು ಟನ್ ಭತ್ತ ಅಥವಾ ರಾಗಿ ಹುಲ್ಲಿಗೆ (ಸಾಗಾಣಿಕೆ ವೆಚ್ಚ ಸೇರಿದಂತೆ) 6,000 ರೂ.ಗಳು ನಿಗದಿಯಾಗಿರುತ್ತದೆ.ಆಸಕ್ತ ರೈತರು ತಮ್ಮ ಮೇವು ಲಭ್ಯತೆ ಮಾಹಿತಿಯೊಂದಿಗೆ ಹೊಸಪೇಟೆ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬೆಣ್ಣಿ ಮೊ.ಸಂ: 9448127848, ಇವರನ್ನು ಸಂಪರ್ಕಿಸಬಹುದಾಗಿದೆ.




# ಇಲಾಖಾವಾರು ಕಾನೂನು ಅರಿವು ನೆರವು

## ನ್ಯಾ. ಅಬ್ದುಲ್ ರಹೀಮಾನ ಎ. ನಂದಗಡಿ ಸೂಚನೆ | ದ್ವಿಮಾಸಿಕ ಸಭೆ | ಅರ್ಥಪೂರ್ಣ ಆಚರಣೆಗೆ ಆದ್ಯತೆ ಇರಲಿ



**ಹಂಪಿ ಟೈಮ್ಸ್ ಹೊಸಪೇಟೆ**
ಇಲಾಖಾವಾರು ಕಾನೂನು ಅರಿವು ನೆರವು ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ರೂಪಿಸಬೇಕು ಎಂದು 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ. ನಂದಗಡಿ ಅವರು ಹೇಳಿದರು.

ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ಶುಕ್ರವಾರ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆವರಣದಲ್ಲಿ ಏರ್ಪಡಿಸಿದ ದ್ವಿಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂಬರುವ ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಇರುವ ಆರೋಗ್ಯ, ಆಹಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರ ಇಲಾಖೆಗಳ ಕಾರ್ಯಕ್ರಮಗಳಲ್ಲಿ ಕಾನೂನು ಸೇವಾ ಸಮಿತಿಯ ಸಹಯೋಗದೊಂದಿಗೆ ಸಾರ್ವಜನಿಕರಿಗೆ ಇಲಾಖಾ ಕಾರ್ಯಕ್ರಮದ ಕುರಿತಾ ಕಾನೂನು ಅರಿವು ನೆರವನ್ನು ನೀಡಬೇಕು.

ಪ್ರಸಕ್ತ ಡಿಸೆಂಬರ್ ಮಾಹೆಯಲ್ಲಿನ ಗ್ರಾಹಕರ ಹಕ್ಕುಗಳ ದಿನಾಚರಣೆ, ಜನವರಿಯಿಂದ ಮತ್ತು ಮಾರ್ಚ್ ತಿಂಗಳ ವರೆಗಿನ ಯುವ ದಿನ, ಮತದಾರರ ದಿನಾಚರಣೆ, ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆ, ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಆಹಾರ ನಾಗರಿಕರ ದಿನಾಚರಣೆ ಹಾಗೂ ವಿಶ್ವ ಜಲ ದಿನಾಚರಣೆಯ ಕಾರ್ಯಕ್ರಮಗಳನ್ನು ಕಾನೂನು ಅರಿವು ನೆರವು ಮೂಲಕ ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಫೆಬ್ರವರಿ ಮಾಹೆಯಲ್ಲಿ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜೀ ಆಗಬಹುದಾದ ಸಿವಿಲ್, ಎಲ್.ಎ.ಸಿ. ಹಾಗೂ ಇತರೇ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥ ಪಡಿಸಲು ಅವಕಾಶವಿದ್ದು, ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಹಕರಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಹೇಮಲತಾ ಬಿ. ಹುಲ್ಲೂರ, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಮೇಶ ಬಾಬು ಬಿ.ಎನ್., ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಸದಸ್ಯಕಾರ್ಯದರ್ಶಿಗಳಾದ ಕಿಶನ್ ಬಿ.ಮಾಡಲಗಿ, 3ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಚೈತ್ರಾ ಜೆ. ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



# ಹನುಮಮಾಲಾ ವಿಸರ್ಜನೆಗೆ ಸಹಕರಿಸಿ ಯಶಸ್ವಿಗೊಳಿಸಿ

## ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಮನವಿ | ಮೂಲಭೂತ ಸೌಲಭ್ಯ ವ್ಯವಸ್ಥೆ ಪರಿಶೀಲನೆ

**ಹಂಪಿ ಟೈಮ್ಸ್ ಕೊಪ್ಪಳ**
ಡಿಸೆಂಬರ್ 23 ಮತ್ತು 24ರಂದು ನಡೆಯಲಿರುವ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮದ ಯಶಸ್ಸಿಗೆ ಕೊಪ್ಪಳ ಜಿಲ್ಲೆಯ ಸಾರ್ವಜನಿಕರು ಸೇರಿದಂತೆ ರಾಜ್ಯದ ಹಾಗೂ ದೇಶದ ನಾನಾ ಭಾಗಗಳಿಂದ ಅಂಜನಾದ್ರಿಗೆ ಬರುವ ಹನುಮಮಾಲಾಧಾರಿಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಮನವಿ ಮಾಡಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರು ಈಗಾಗಲೇ ಹಲವು ಸುತ್ತಿನ ಸಭೆ ನಡೆಸಿ ಸಿದ್ಧತೆಗೆ ಸೂಚನೆ ನೀಡಿದ್ದಾರೆ. ಮುಜರಾಯಿ ಸಚಿವರು ಸಹ ಜಿಲ್ಲೆಗೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿದ್ದಾರೆ. ಅದರಂತೆ ಎಲ್ಲಾ ಕಾರ್ಯವ್ಯವಸ್ಥೆ ಮಾಡಲಾಗಿದೆ.

ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ಜಿಲ್ಲಾಡಳಿತದಿಂದ ನಾನಾ ಸಮಿತಿ ರಚಿಸಿ, ನೋಡಲ್ ಅಧಿಕಾರಿಗಳನ್ನು ನೇಮಿಸಿ, ಹಲವು ಸುತ್ತಿನ ಸಭೆ ನಡೆಸಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಖುದ್ದು ಅಂಜನಾದ್ರಿಗೆ ಭೇಟಿ ನೀಡಿ ಅಲ್ಲಿನ ವಾಸ್ತವ ಸ್ಥಿತಿಗತಿಯನ್ನು ಪರಿಶೀಲಿಸಲಾಗಿದೆ. ಡಿಸೆಂಬರ್ 22ರಂದು ಸಹ ಅಂಜನಾದ್ರಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ಅಂತಿಮ ಹಂತದ ಸಿದ್ಧತೆಯನ್ನು ಖಾತ್ರಿಪಡಿಸಿಕೊಳ್ಳಲಾಗಿದೆ.

ಶ್ರೀ ಆಂಜನೇಯ ಜನ್ಮಸ್ಥಳ ಅಂಜನಾದ್ರಿಯು ಕೊಪ್ಪಳ ಜಿಲ್ಲೆಯಲ್ಲಿ ಇರುವುದು ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ. ಅಂಜನಾದ್ರಿಗೆ ಬರುವವ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಎಷ್ಟೇ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದರು ಸಹ ಎಲ್ಲರಿಗೂ ಅನುಕೂಲವಾಗುವ ಹಾಗೆ ಅಂಜನಾದ್ರಿಯಲ್ಲಿ ಕುಡಿಯುವ ನೀರು, ಸ್ನಾನ ಗೃಹಗಳು, ಪಾರ್ಕಿಂಗ್, ಶೌಚಾಲಯಗಳು ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯದ ವ್ಯವಸ್ಥೆ ಕಲ್ಪಿಸಲಾಗಿದೆ.

ಹನುಮಮಾಲಾ ವಿಸರ್ಜನೆ ಸಮಯದಲ್ಲಿ ಭಕ್ತರು ಶಾಂತಿ ಕಾಪಾಡಬೇಕು. ಜನಸಂದಣಿಯಾಗದಂತೆ ಸಹಕರಿಸಬೇಕು. ಯಾವುದೇ ರೀತಿಯ ಅವಘಡಗಳು ಸಂಭವಿಸಿದಂತೆ ಪೊಲೀಸ್ ಸೇರಿದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

ಕಾರ್ಯಕ್ರಮಕ್ಕಾಗಿ ಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ವಿವಿಧ ಸ್ಥಳಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆಯಲಾಗಿದ್ದು ಅಲ್ಲಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹನುಮಮಾಲಾಧಾರಿಗಳು ಸೇರಿದಂತೆ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಂದಾಯ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ನಾನಾ ಅಧಿಕಾರಿಗಳನ್ನೊಳಗೊಂಡು ಅಂಜನಾದ್ರಿ ಕಂಟ್ರೋಲ್ ರೂಮ್ ಸ್ಥಾಪಿಸಲಾಗಿದೆ. ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಿಸಿ ಕ್ಯಾಮರಾ ಅಳವಡಿಸಿ ನಿಗಾ ವಹಿಸಲಾಗುತ್ತಿದೆ. ವಿವಿಧೆಡೆ ಚೆಕ್‌ಪೋಸ್ಟ್ ನಡೆಸಿ ವಾಹನ ತಪಾಸಣೆ ಸೇರಿದಂತೆ ಭಕ್ತರ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ವಹಿಸಲಾಗಿದೆ. ಹನುಮಮಾಲಾಧಾರಿಗಳು ಸೇರಿದಂತೆ ಎಲ್ಲರಿಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ಆದ್ದರಿಂದ ಅಂಜನಾದ್ರಿಗೆ ಬರುವ ಹನುಮ ಭಕ್ತರು ಹಾಗೂ ಎಲ್ಲರೂ ಶಾಂತಿ ಕಾಪಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.



# ಹನುಮಮಾಲಾ ವಿಸರ್ಜನ ಸ್ಥಳ ಹುಡುಕಲು ಕ್ಯೂಆರ್ ಕೋಡ್ ಬಳಸಿ

**ಹಂಪಿ ಟೈಮ್ಸ್ ಕೊಪ್ಪಳ:**
ಡಿಸೆಂಬರ್ 23 ಮತ್ತು 24ರಂದು ನಡೆಯಲಿರುವ ಹನುಮಮಾಲಾ ವಿಸರ್ಜನೆ ಕಾರ್ಯಕ್ರಮ ಹಿನ್ನೆಲೆಯಲ್ಲಿ ಅಂಜನಾದ್ರಿಗೆ ಬರುವ ಭಕ್ತರಿಗೆ ನಾನಾ ಸೌಲಭ್ಯಗಳ ಮಾಹಿತಿ ಲಭ್ಯವಾಗುವ ಹಾಗೆ ಜಿಲ್ಲಾಡಳಿತವು ಈ ಬಾರಿ ಕ್ಯೂಆರ್ ಕೋಡ್ ವಿಶೇಷ ವ್ಯವಸ್ಥೆಯನ್ನು ಸಹ ಮಾಡಿದೆ.
ಕೊಪ್ಪಳ ಜಿಲ್ಲೆಯ ಅಂಜನಾದ್ರಿಯಲ್ಲಿ ಪಾರ್ಕಿಂಗ್ ಸ್ಥಳಗಳು ಯಾವ ಯಾವ ಕಡೆಗಿವೆ. ಪ್ರಥಮ ಚಿಕಿತ್ಸಾ ಕೇಂದ್ರಗಳ ಎಲ್ಲಿಲ್ಲೆ ಇವೆ. ಕುಡಿಯುವ ನೀರಿನ ಸ್ಥಳಗಳು, ಸಹಾಯವಾಣಿ ಕೇಂದ್ರಗಳು, ಸ್ನಾನಗೃಹಗಳ ಸ್ಥಳಗಳು ಯಾವ ಯಾವ ಕಡೆಗಳಲ್ಲಿ ಇವೆ ಎಂಬುದು ಸೇರಿದಂತೆ ನಾನಾ ಸೌಲಭ್ಯಗಳು ದೊರಕುವ ಸ್ಥಳಗಳ ಮಾಹಿತಿಯನ್ನು ಈ ಕ್ಯೂಆರ್ ಕೋಡ್ ಮೂಲಕ ಪಡೆಯಬಹುದಾಗಿದೆ.

ಅಂಜನಾದ್ರಿಗೆ ಹೊಸದಾಗಿ ಬರುವ ಭಕ್ತರಿಗೆ ಸೇರಿದಂತೆ ಪ್ರತಿಯೊಬ್ಬರಿಗೂ ಅನುಕೂಲವಾಗುವ ನಿಟ್ಟಿನಲ್ಲಿ ಈ ಬಾರಿ ಕ್ಯೂಆರ್ ಕೋಡ್ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಡಳಿತದ ವೆಬ್‌ಸೈಟ್‌ನಲ್ಲಿ ಅಳವಡಿಸಿದ ಲಿಂಕ್ ಮೂಲಕವು ಈ ಮೇಲಿನ ಸ್ಥಳಗಳ ಮಾಹಿತಿಯನ್ನು ಪಡೆಯಬಹುದಾಗಿದೆ. ಭಕ್ತರ ಅನುಕೂಲಕ್ಕೆ ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಲಿಂಕ್ https://koppal.nic.in/hanumamala-events1/ ಇರುತ್ತದೆ ಎಂದು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com













ನಿಮ್ಮ ಹೊಸ ಹೊಸ ಉತ್ಪನ್ನಗಳು, ವಿಶೇಷ ಕೊಡುಗೆಗಳು ಮತ್ತು ಕಾಲೇಜು ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ:
ಹಂಪಿ ಟೈಮ್ಸ್ :
9448633038







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA